# ಟೆಕ್ನೊಫೋಬಿಯಾ

## ಹಿರಿಯರಿಗೆ ತಂತ್ರಜ್ಞಾನದ ಭಯ

**ಇಂದಿನ ಜಗತ್ತಿನಲ್ಲಿ ತಂತ್ರಜ್ಞಾನ ಬಹಳಷ್ಟು ಮುಂದುವರಿದಿದೆ. ಆದರೆ ಇದನ್ನು ಬಳಸಲಾಗದೆ, ತಂತ್ರಜ್ಞಾನವನ್ನು ಸಾರಾಸಗಟಾಗಿ ತಿರಸ್ಕರಿಸುವ ಹಿರಿಯರು ಬಹಳಷ್ಟು. ಇವರೆಲ್ಲರನ್ನು ಕಾಡುತ್ತಿರುವ ಹೆದರಿಕೆಯೇ ತಂತ್ರಜ್ಞಾನದ ಭಯ ಅರ್ಥಾತ್ ಟೆಕ್ನೊಫೋಬಿಯಾ.**



■ ಡಾ. ಕೆ.ಎಸ್. ಪವಿತ್ರ

‘ಅಯ್ಯೋ! ನನಗೆ ಆ ದೊಡ್ಡ ಫೋನು ಹಿಡಿದು ಮೆಸೇಜ್ ಮಾಡೋದಿಕ್ಕೆ ಸಾಧ್ಯವಿಲ್ಲ. ಒಟಿಪಿ ಬಂದಾಕ್ಷಣ ಹೇಳೋದಿಕ್ಕೆ ಬರಲ್ಲ. ಗ್ಯಾಸ್ ಬುಕ್ ಮಾಡ್ಬೇಕಂದ್ರೆ ಯಾವ ನಂಬರ್‌ಗೆ ಮಾಡ್ಬೇಕೂಂತ ಹುಡುಕೋದಿಕ್ಕೆ ಸಾಕು ಸಾಕಾಗುತ್ತೆ. ನನ್ನ ಮಗ ಮಗಳು ಹೇಳ್ತಾರೆ ಎಲ್ಲಾ ಆನ್‌ಲೈನ್ ಬುಕ್ ಮಾಡಿದ್ರಾಯ್ತು, ಯಾಕೆ ಅಷ್ಟೆಲ್ಲಾ ಟ್ರಾವೆಲ್ ಏಜೆಂಟ್‌ಗೆ ದುಡ್ಡು ಸುರಿಯೋದು ಅಂತ, ಆದ್ರೆ ಅದು ಅಷ್ಟು ಸುಲಭನಾ? ಕಾಗದದಲ್ಲಿ ಪ್ರಿಂಟಾಗಿರೋ ಟಿಕೆಟ್ ಆದ್ರೆ ತಕ್ಷಣ ಚೀಲದಿಂದ ತೆಗೆದು ತೋರಿಸಬಹುದು. ಮಗ ಆನ್‌ಲೈನ್‌ನಲ್ಲಿ ಬುಕ್ ಮಾಡಿ ಮೊಬೈಲ್‌ಗೆ ಕಳಿಸಿರುವ ಇ ಟಿಕೆಟ್ ಹೇಗೆ ತೆಗೆದು ತೋರಿಸೋದು ಅಂತ ಎಷ್ಟು ಸಲ ಕಲಿತುಕೊಂಡ್ರೂ ಬೇಕಾದ ಸಮಯದಲ್ಲಿ ಕೈಕೊಟ್ಟು ಬಿಡುತ್ತೆ. ತಂತ್ರಜ್ಞಾನ ಬಂದಿದೆ, ಎಲ್ಲವೂ ಎಷ್ಟು ಸುಲಭ ಅಂತಾರೆ ಜನ, ನನಗೇನೋ ಈ ತಂತ್ರಜ್ಞಾನ ಅಂದ್ರೆ ಭಯ; ಹೀಗೆ ಹೇಳಿದರು ಒಬ್ಬ ಹಿರಿಯ ನಾಗರಿಕರು.

ಮತ್ತೊಂದು ಇಂಥದ್ದೇ ಪ್ರಕರಣ. ಹಿರಿಯ ಮಹಿಳೆಯೊಬ್ಬರು ಹೇಳಿದ್ದು ‘ಮೊನ್ನೆ ಸೂಪರ್ ಮಾರ್ಕೆಟ್‌ಗೆ ಅಂತ ಹೋದೆ. ಎಲ್ಲಾ ಕ್ಯಾಷ್‌ಲೆಸ್ ಅಂದ್ರು. ನನ್ನ ಹತ್ರ ಎಷ್ಟೊಂದು ದುಡ್ಡು ಇದ್ರೂ ಉಪಯೋಗ ಇಲ್ಲ! ಜಿಪೇ, ಫೋನ್‌ಪೇ ಮಾಡೋಣ ಅಂದ್ರೆ ನನಗೆ ಅದು ಗೊತ್ತಾಗಲ್ಲ, ಬೇರೆಯವರ ಹತ್ರ ಮಾಡಿಕೊಡಿ ಅಂತ ಕೇಳೋಕೆಎಲ್ಲಿ ಮೋಸ ಮಾಡ್ತಾರೋ ಅಂತ ಭಯ. ತೆಗೆದುಕೊಂಡ ಸಾಮಾನು ಎಲ್ಲ ಹಾಗೇ ಪಕ್ಕಕ್ಕಿಟ್ಟು, ಬರಿಗೈಲಿ ಮನೆಗೆ ಬರಬೇಕಾಯ್ತು. ಇದೇ ರೀತಿ ದಾರಿ ಹುಡುಕಲು ಜಿಪಿಎಸ್ ಹಾಕಲಾಗದೆ ಪರದಾಡುವ, ದಾರಿ ಕೇಳಲು ಜನರನ್ನು ಹುಡುಕಾಡುವ, ಕಂಪ್ಯೂಟರ್ ಕಲಿಯಲು ಅಯ್ಯೋ ಇನ್ನೇನು ಕಲಿಯೋದು ಎಂದು ತಳ್ಳಿ ಹಾಕುವ, ಸ್ಕೈಪ್ ಜೂಮ್ ತೆರೆಗಳ ಮೇಲೆ ಮಾತನಾಡಿದರೆ ನಮಗಾಗದು, ನೇರವಾಗಿ ಮುಖ ನೋಡಿ, ಮುಟ್ಟಿಯೇ ಮಾತನಾಡಬೇಕು ಎಂದು ಹಾತೊರೆಯುವ, ಒಟ್ಟಿನಲ್ಲಿ ತಂತ್ರಜ್ಞಾನವನ್ನು ಸಾರಾಸಗಟಾಗಿತಿರಸ್ಕರಿಸುವಹಿರಿಯರುಬಹಳಷ್ಟು.

ಇವರೆಲ್ಲರನ್ನು ಕಾಡುತ್ತಿರುವ ಹೆದರಿಕೆಯೇ ‘ತಂತ್ರಜ್ಞಾನದ ಭಯ ಅರ್ಥಾತ್ ಟೆಕ್ನೊಫೋಬಿಯಾ.